ಜೋರಾಗಿ ತುಳಿತುಳಿದು ದಣಿವಿನಲ್ಲಿ ಲೆಕ್ಕಾಚಾರಕ್ಕೆ ತೊಡಗುವುದು. ಒಂಥರ ಹುಚ್ಚಾಗಿ ಬೆಳೆದುಬಿಟ್ಟಿತ್ತು.

## 5

'ಮನುಷ್ಯರು ಸತ್ತಾಗ ಹಾಕ್ತಾರಲ್ಲ ಅಷ್ಟು ಬೆಂಕಿ... ಅದರ ಸುತ್ತ ಓಡಾಡ್ತಾ ಇದ್ರು... ಏನೋ ಚೀಟಿಯಲ್ಲಿ ಬರೆದಿದ್ದು ಓದ್ತಾ ಇದ್ರು... ಬರಿ ಚಡ್ಡಿ ಮೇಲಿದ್ರು... ಹೂವಿನ ಹಾರ ಎಲ್ಲ ಇಟ್ಕಂಡಿದ್ರು... ಅದರೊಳಗೆ ಬೀಳುವಂಗೆ ಕೈಬೀಸಿ ಕಾಲು ಮಡಚಿ ಮಾಡ್ತಾ ಇದ್ರು... ನಮ್ಮನಿಯಾಗೆ ಯಾರಿಲ್ಲ... ವಾರದಿಂದ ಹಿಂಗೇ ಮಾಡ್ತಿದ್ರು... ಇವತ್ತು ಮಾತ್ರ ಬೆಂಕಿ ಹಾಕ್ಕಂಡೀರು...' ಅಂದು ಮೆಟ್ಟಿಲ ಕೆಳಗೆ ಇಳಿದು ಕೂಗಿದಳು... ಧ್ವನಿ ಹೊರಡುತ್ತಿಲ್ಲ... ಇವರಿಗೆ ಇದನ್ನು ಇದರ ತೀವ್ರತೆಯಲ್ಲಿ ಮುಟ್ಟಿಸಲಾಗುತ್ತಿಲ್ಲ... ನನ್ನಿಂದ ಏನನ್ನೂ ದೂಡಲಾಗುತ್ತಿಲ್ಲ. ನನ್ನನ್ನು ಬರಿದೆ ಸಣ್ಣ ಹುಡುಗಿ... ಏನೂ ಗೊತ್ತಾಗದವಳು... ಅರ್ಥವಾಗದವಳು... ಪೆದ್ದರ ಮಗಳು. ಒಡವಳು, ಹೀನಳು.. ಅಂದುಕೊಂಡಿದ್ದಾರೆಯೆ.... ಅಂತೆಲ್ಲ ಒಮ್ಮೆಲೆ ಯೋಚಿಸಿ ಕಣ್ಣೀರ ಧಾರೆಯಾಗಿಹೋಗಿದ್ದಳು... ಲಕ್ಷ್ಮಿ ನನ್ನ ಸ್ವಂತ ಮಾಮನ ಮಗಳು. ಲಕ್ಷ್ಮಿಯ ಅಮ್ಮನಿಗೆ ಅನ್ಯಾಯ ಮಾಡಿ ನನ್ನ ಮಾಮ ತಲೆಮರೆಸಿಕೊಂಡು ಹೋಗಿದ್ದಾನಂತೆ. ಲಕ್ಷ್ಮಿಯ ಅಮ್ಮ ಲಕ್ಷ್ಮಿಯನ್ನು ಹೆರುವಾಗಲೇ ಸತ್ತು ಹೋದಳಂತೆ..

ರಾಜೇಶ್ವರಿಯಮ್ಮನಿಗೆ ಈಗ ಈ ಸ್ಕೂಲಿನ ಎಳೆ ಹುಡುಗಿಯ ಎಲ್ಲ ಏದುಸಿರು, ಬೆವರು, ಗೊಗ್ಗರು ದನಿ, ಹೂತ ಗಂಟಲು, ಗಲೀಜು ಕಾಲು, ಕೆದರಿದ ಕೂದಲಿನ ಅವತಾರ... ಎಲ್ಲ ಹೊಳೆದಂತೆ... ಮಂಡಿನೋವು, ಮನದ ಬೇಜಾರು, ಬುದ್ಧಿಯ ಆಲಸ್ಯ ಓಡಿಹೋದಂತೆ ದೊಡ್ಡದಾಗಿ ಬಾಯ್ತೆರೆದು... ಎರಡೂ ಕೈಗಳನ್ನು ಹಿಂದಕ್ಕೆ ಚಾಚಿ ಬಿದ್ದು ತನ್ನ ಮಗನ 'ನಾಗಶಯನಾ...' ಅಂತಾ ಕೂಗಿ ಕರೆಯುತ್ತ ಬಾಗಿಲೆಡೆ ಕೈ ಬೆರಳು ತೋರಿಸುತ್ತ ಒದ್ದಾಡತೊಡಗಿದರು. ದಣಪೆ ದಾಟಿ ನಿಂತು ಸೈಕಲ್ಲಿನ ಕಡೆ ಓಡಬೇಕೆಂದಿದ್ದವಳು ಬಿದ್ದ ಹೆಂಗಸನ್ನು ಎತ್ತುವುದೋ ಒಳಕೋಣೆಯಿಂದ ಅಂಗಿಯಿಲ್ಲದೆ ನಿದ್ದೆ ಅಮಲಿನಲ್ಲಿ ಓಡಿಬರುತ್ತಿದ್ದ ಮೀಸೆ ಅಣ್ಣನ ಕಂಡು ಹೆದರಿ ಓಡುವುದೋ ಒಂದೂ ಹೊಳೆಯದೆ ಗರಬಡಿದವಳಂತೆ ನಿಂತುಬಿಟ್ಟಿದ್ದಳು. 'ನಾಗಶಯನಾ... ನಿನ್ನ ಅಕ್ಕನ ಹೆಣದ ಸಂಸ್ಕಾರ ಮಾಡಲಿಲ್ಲ ಅಂತ ನಿನ್ನ ಅಜ್ಜ ತನ್ನ ಸಂಸ್ಕಾರ ತಾನೇ ಮಾಡಿಕೊಳ್ಳುತ್ತಾನಲ್ಲೋ. ಹೋಗೋ... ಓಡೋ.. ನಿಲ್ಲೋ...' ತನ್ನ ಮನೆಯ ದಿಕ್ಕಿನಿಂದ ದಟ್ಟಹೊಗೆಯ ದೊಡ್ಡಮೋಡ ಬೆಳೆಯುತ್ತ ಬೆಳೆಯುತ್ತ ಇನ್ನೂ ದೊಡ್ಡದಾಗುತ್ತ ಹರಡತೊಡಗಿದ್ದನ್ನು ಕಂಬನಿಗಣ್ಣಲ್ಲಿ ಕಂಡಳು. ಎಲ್ಲೋ ಶಾ ಅಂತಾ ಕೂಗಿದ ಹಾಗೆ... ಎಲ್ಲೋ ಏಯ್ ಪುಟ್ಟೀ ಅಂತಾ ಕರೆದ ಹಾಗೆ. ಎಲ್ಲೋ ವೈಶಾಲಿನೀ... ಅಂತಾ ರಾಗವೆಳೆದ ಹಾಗೆ... ಮನೆಯ ಹೊರಗಿನ ಬೇಲಿಸಾಲಿನಲ್ಲಿ ಮನೆಯೊಳಗಿನ ಚಿತ್ರಣದಲ್ಲಿ ಸಾಲು ಹಿಡಿದ ಫೋಟೋಗಳಲ್ಲಿ ಪ್ರಾಯದ ಹೆಂಗಸಿನ ಫೋಟೋ... ಶಾಲಿನಿ ಹೆಸರು... ಅದರ ಪಕ್ಕ... ಗಂಡಸಿನ ಫೋಟೋ... ಮಾಮಾನಂತ ವ್ಯಕ್ತಿಯದ್ದು... ಅದರ ಪಕ್ಕ ಫೋಟೋ... ಪುಟ್ಟಲಕ್ಷ್ಮಿಯದ್ದು. ಅದರ ಪಕ್ಕ ಖಾಲಿ ಫೋಟೋ! ಅಜ್ಜನ ಚಿತ್ರ ಮೂಡತೊಡಗಿದಂತೆ ಭಾಸ. ಒಳಮನೆಯಿಂದ ಈಗಷ್ಟೆ ತೆರೆದ ಕಿಟಕಿಯಿಂದ ಯಾರೋ ಜೋರಾಗಿ ಜೋಕಾಲಿ ಜೀಕುವ ಸದ್ದು... ತಂತಾನೇ ತೆರೆದುಕೊಂಡ ಬಾಗಿಲಲ್ಲಿ ಜೋಕಾಲಿಯ ಬದಲು ಅಂತರಿಕ್ಷದಲಿ ಕಾಲುಗಳು ತೇಲಾಡುವ ಚಿತ್ರ... ಬೆವರು... ಬೆರಗು... ಬಿಸಿ... ಭಯ... ಬೈಸಿಕಲ್ಲನ್ನು ಪ್ರಶಾಂತ ಮಾಮಾನ ಬೈಕಿಗಿಂತಲೂ ವೇಗವಾಗಿ ಓಡುವಂತೆ ತುಳಿಯುತ್ತ ತುಳಿಯುತ್ತ ತುಳಿಯುತ್ತ ಎಡಬಲ ತಗ್ಗುದಿಣ್ಣೆ ಹಾರಿಸುತ್ತ ಜನರೆಲ್ಲ ಎಬ್ಬಿಸಿದ್ದ ಗದ್ದಲದೆಡೆ ಸಮೀಪಿಸುತ್ತ ನಾಗರಕಟ್ಟೆ ದಾಟಿ... ಶಲಿನಿಪಶಂತ ಮರ ದಾಟಿ... ಬಾವಿ ದಾಟಿ... ಸ್ಕೂಲು ದಾಟಿ... ಸಾಗಿದಳು... ಒಮ್ಮೆಲೆ ತುಳಿಯುವುದು ನಿಲ್ಲಿಸಿದಳು. ಯೋಚಿಸತೊಡಗಿದಳು.ಅಜ್ಜನೆಂದರೆ ಸಮಯ. ಈಗ ಸಮಯದ ಲೆಕ್ಕ ಹೇಗೆ ಹಾಕುವುದು. ನಾಗರಕಟ್ಟೆಗೆ ಕೂತವರೆಲ್ಲ ಸಮಯವನ್ನು ಕಳೆದುಕೊಳ್ಳುತ್ತಾರೆ. ತಮ್ಮ ಜಾತಿ ಕಳೆದುಕೊಳ್ಳುತ್ತಾರೆ. ತಮ್ಮ ಸಿಟ್ಟು ದ್ವೇಷ ಸೇಡು ಆಸೆ ಕಳೆದುಕೊಳ್ಳುತ್ತಾರೆ...



●